2004–05	2005–06	2006–07
1006–10	1618–41	1687–75

ಆ) ಮೇಲಿನ ಔಷಧಿಗಳನ್ನು ಖರೀದಿಸಲು ಕೆಟಿಪಿಪಿ ನಿಯಮಾವಳಿ ಪ್ರಕಾರ 2004–05ನೇ ಸಾಲಿನ ಟೆಂಡರ್ ಮುಖಾಂತರ ದರಗುತ್ತಿಗೆ ಮೇಲೆ ಲಭ್ಯವಿರುವ ಅನುದಾನದ ಹಾಗೂ ಅವಶ್ಯಕತೆ ಗಮನದಲ್ಲಿರಿಸಿ ಖರೀದಿಸುವ ಕ್ರಮ ವಹಿಸಲಾಗಿದೆ

ಇ) ಈ ಔಷಧಿ ಖರೀದಿಯ ನಂತರ ಜಾನುವಾರುಗಳ ಸಂಖ್ಯೆಗಳಿಗನುಗುಣವಾಗಿ ಎಲ್ಲಾ ಜಿಲ್ಲೆಗಳಿಗೆ ವಿತರಣೆ ಮಾಡಲು ಕ್ರಮವಹಿಸಲಾಗಿದೆ ಜಿಲ್ಲಾ ಉಪ ನಿರ್ದೇಶಕರು ಜಿಲ್ಲೆಯಲ್ಲಿ 4 3 2ರ ಅನುಪಾತದಲ್ಲಿ ವಿತರಿಸಿದೆ ಅಂದರೆ ಪಶು ಆಸ್ಪತ್ರೆಗಳಿಗೆ 4 ಭಾಗ, ಪಶು ಚಿಕಿತ್ಸಾಲಯಗಳಿಗೆ 3 ಭಾಗ, ಹಾಗೂ ಪ್ರಾಥಮಿಕ ಮತ್ತು ಚಿಕಿತ್ಸಾ ಕೇಂದ್ರ ಮತ್ತು ಗರ್ಭದಾರಣಾ ಕೇಂದ್ರಗಳಿಗೆ 2 ಭಾಗದಂತೆ ಸರಕು ಪಟ್ಟಿ ಮುಖಾಂತರ ವಿತರಣೆ ಮಾಡಲು ಕ್ರಮ ಜರುಗಿಸಿರುತ್ತಾರೆ ವಿತರಣೆ ನಂತರ ಜಿಲ್ಲಾ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಹಾಗೂ ಪಶುವೈದ್ಯಾಧಿಕಾರಿಗಳು ತಮ್ಮ ಅಧೀನ ಸಂಸ್ಥೆಗಳ ತಾಂತ್ರಿಕ ತಪಾಸಣೆ ಮಾಡಿ ಸದ್ಬಳಕೆ ಬಗ್ಗೆ ಪ್ರತಿ ಮಾಹೆ ವರದಿ ತರಿಸಿಕೊಳ್ಳುವ ಮುಖಾಂತರ ಖಾತರಿಪಡಿಸಿಕೊಳ್ಳಲಾಗುತ್ತಿದೆ ಹಾಗೂ ಈ ಬಗ್ಗೆ ಕೆ ಡಿ ಪಿ ಪ್ರಗತಿಯಲ್ಲಿ ತಾಂತ್ರಿಕ ತಪಾಸಣೆಗಾಗಿ ಗುರಿ ನಿಗಧಿಪಡಿಸಿ ತೀವ್ರ ನಿಗಾವಹಿಸಿದೆ

ಈ) ಇಲ್ಲ, ಪ್ರತಿ ಪಶು ಆಸ್ಪತ್ರೆಗಳಿಗೆ, ಪಶು ಚಿಕಿತ್ಸಾಲಯಗಳಿಗೆ ಬೇಡಿಕೆಗೆ ಅನುಗುಣವಾಗಿ ಔಷಧಿಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ, ಶೇ 25 ರಿಂದ 30ರಷ್ಟು ಬೇಡಿಕೆ ಮಾತ್ರ ಪೂರೈಸಲಾಗುತ್ತಿದೆ

577(701) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಕುರಿ, ಕುಕ್ಕುಟ, ಹಂದಿ ಹಾಗೂ ಜಾನುವಾರುಗಳ ಅಭಿವೃದ್ಧಿಗಾಗಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು? ?

ಆ) ಇವುಗಳಿಗಾಗಿ ಸರ್ಕಾರವು 2006–07ನೇ ಸಾಲಿನಲ್ಲಿ ಒದಗಿಸಲಾದ ಅನುದಾನವೆಷ್ಟು?

ಇ) ಡಿಸೆಂಬರ್ 2007ರವರೆಗೆ ಜಾನುವಾರುಗಳ ಅಭಿವೃದ್ಧಿಗಾಗಿ ವಿನಿಯೋಗಿಸಲಾದ ಅನುದಾನವೆಷ್ಟು? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಈ) ಇವುಗಳ ಅಭಿವೃದ್ಧಿಗಾಗಿ ಹೊಸದಾಗಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವಿದೆಯೆ?

ಉ) ಹಾಗಿದ್ದಲ್ಲಿ, ರಾಜ್ಯದ ಹಿಂದುಳಿದ ತಾಲ್ಲೂಕುಗಳಿಗೆ ಪ್ರಾತಿನಿಧ್ಯ ನೀಡಲಾಗುವುದೇ? ಹಾಗಿದ್ದಲ್ಲಿ, ಯಾವ ಯಾವ ಗ್ರಾಮಗಳಲ್ಲಿ ಹೊಸದಾಗಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಜಾನುವಾರು ಅಭಿವೃದ್ಧಿಗಾಗಿ ರಾಜ್ಯದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ವಿವರಗಳನ್ನು ಅನುಬಂಧ–1 ರಲ್ಲಿ ವಿವರವಾಗಿ ಸಲ್ಲಿಸಿದೆ

ಆ) 2006–07ನೇ ಸಾಲಿನಲ್ಲಿ ಈ ಕಾರ್ಯಕ್ರಮಗಳಿಗೆ ರಾಜ್ಯ ಮತ್ತು ಜಿಲ್ಲಾವಲಯ ಕಾರ್ಯಕ್ರಮಗಳ ಅಡಿಯಲ್ಲಿ ಒಟ್ಟು ರೂ 16400 38 ಲಕ್ಷಗಳ ಅನುದಾನ, ಕುರಿ ಮಂಡಳಿಗೆ 800 00 ಲಕ್ಷ, ಕುಕ್ಕುಟ ಸಹಕಾರ ಮಂಡಳಿಗೆ 15 00 ಲಕ್ಷ ಹಾಗೂ ರಾಜ್ಯವಲಯದ ಕುಕ್ಕುಟ ಕ್ಷೇತ್ರಕ್ಕೆ ರೂ 308 78 ಲಕ್ಷಗಳ ಅನುದಾನ ಒದಗಿಸಿದೆ

ಇ) ಡಿಸೆಂಬರ್ ಅಂತ್ಯದವರೆಗೆ ಈ ಜಾನುವಾರು ಅಭಿವೃದ್ಧಿ ಜಿಲ್ಲಾವಲಯ ಕಾರ್ಯಕ್ರಮಗಳಲ್ಲಿ 1771 54 ಲಕ್ಷಗಳ ಅನುದಾನ ವಿನಿಯೋಗವಾಗಿದೆ ಕುರಿ ಮಂಡಳಿಯಿಂದ ಕುರಿಗಳ ಆರೋಗ್ಯ ರಕ್ಷಣೆ, 75 00 ಲಕ್ಷಗಳ ಅನುದಾನ ವಿತರಣೆಗಾಗಿ 10 00 ಲಕ್ಷಗಳ ಅನುದಾನ ವಿನಿಯೋಗವಾಗಿದೆ ರಾಜ್ಯವಲಯ ಕುಕ್ಕುಟ ಕ್ಷೇತ್ರದಲ್ಲಿ ರೂ 34 24 ರೂ ಗಳ ಅನುದಾನ ವಿನಿಯೋಗವಾಗಿದೆ ಜಿಲ್ಲಾವಾರು ಕಾರ್ಯಕ್ರಮಕ್ಕೆ, ಹಣ ಬಿಡುಗಡೆ ಬಗ್ಗೆ ವಿವರಗಳನ್ನು ಅನುಬಂಧ–2 ರಲ್ಲಿ ಸಲ್ಲಿಸಿದೆ

ಈ) ಪ್ರಾದೇಶಿಕ ಅಸಮತೋಲನಾ ನಿವಾರಣೆ ವರದಿಯಂತೆ 318 ಪಶು ಚಿಕಿತ್ಸಾಲಯ ಕೊರತೆ ಇದ್ದು, ಇವುಗಳನ್ನು 8 ವರ್ಷಗಳ ಅವಧಿಯಲ್ಲಿ ಯಾವ ತಾಲ್ಲೂಕುಗಳಲ್ಲಿ ಕೊರತೆ ಇವೆಯೋ ಆ ತಾಲ್ಲೂಕುಗಳಲ್ಲಿ ಆದ್ಯತೆ ಮೇಲೆ ಹೊಸದಾಗಿ ತೆರೆಯಲು ಕ್ರಮವಹಿಸಲಾಗುತ್ತಿದೆ

ಉ) ಹೌದು, ಹಿಂದುಳಿದ ತಾಲ್ಲೂಕುಗಳೂ ಸೇರಿದಂತೆ ಕೊರತೆ ಇರುವ ತಾಲ್ಲೂಕುಗಳಲ್ಲಿ ಆದ್ಯತೆ ಮೇಲೆ ತೆರೆಯಲು ಕ್ರಮವಹಿಸಲಾಗುತ್ತಿದೆ, ಆದರೆ ಇನ್ನು ಸ್ಥಳಗಳ ಆಯ್ಕೆ ಅಂತಿಮಗೊಳಿಸಲಾಗಿಲ್ಲ

ಅನುಬಂಧ–1

ಜಾನುವಾರು ಅಭಿವೃದ್ಧಿಗಾಗಿ ರಾಜ್ಯಮಟ್ಟದಲ್ಲಿ ತೆಗೆದುಕೊಂಡಿರುವ ಕ್ರಮಗಳು

1 ತಳಿ ಸಂರಕ್ಷಣೆ

ಅ) ಹಳ್ಳಿಕಾರ್ ತಳಿಯ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ತುಮಕೂರು ಜಿಲ್ಲೆಯ ತುರುವೆಕೆರೆ ತಾಲ್ಲೂಕಿನ ಕುಣಿಕೇನಹಳ್ಳಿ ಸದರಿ ತಳಿಯ ರಾಸುಗಳನ್ನು ಸಾಕಿ, ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ಈ ತಳಿಯ ಹೋರಿ ಕರುಗಳನ್ನು ವೀರ್ಯ ಉತ್ಪಾದನೆಗಾಗಿ ಈ ಕ್ಷೇತ್ರದಿಂದ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿರುವುದಲ್ಲದೇ ಸದರಿ ತಳಿ ವೀರ್ಯವನ್ನು ಹಳ್ಳಿಕಾರ್ ತಳಿ ಪ್ರದೇಶಗಳಲ್ಲಿ ಕೃತಕ ಗರ್ಭಧಾರಣಾ ಕೇಂದ್ರಗಳ ಮೂಲಕ ರಾಸುಗಳ ಗರ್ಭಧಾರಣೆ ಬಳಸಲಾಗುತ್ತಿದೆ ವಾರ್ಷಿಕ ಸುಮಾರು 1 ಲಕ್ಷ 60 ಸಾವಿರ ಹಳ್ಳಿಕಾರ್ ರಾಸುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ

ಆ) ಅಮೃತ್ ಮಹಲ್ ತಳಿ ರಾಸುಗಳ ಅಭಿವೃದ್ಧಿಗಾಗಿ ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ತಾಲ್ಲೂಕಿನ ಅಜ್ಜಂಪುರ ಗ್ರಾಮದಲ್ಲಿ ಹಾಗೂ ಇದಕ್ಕೆ ಹೊಂದಿಕೊಂಡಂತೆ 5 ಉಪಕೇಂದ್ರಗಳಲ್ಲಿ ಅಮೃತ್ ಮಹಲ್ ತಳಿ ರಾಸುಗಳನ್ನು ಸಾಕಿ ಸದರಿ ತಳಿಯ ಸಂರಕ್ಷಣೆ/ಸಂವರ್ಧನೆ ಮತ್ತು ಅಭಿವೃದ್ಧಿಪಡಿಸಲಾಗುತ್ತಿದೆ ಈ ಕ್ಷೇತ್ರಗಳಲ್ಲಿ ಜನಿಸಿದ ಉತ್ತಮ ಗಂಡು ಕರುಗಳನ್ನು ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಸರಬರಾಜು ಮಾಡಿ ಉತ್ಪಾದಿಸಿದ ಘನೀಕೃತ ವೀರ್ಯವನ್ನು ಅಮೃತ್ ಮಹಲ್ ತಳಿ ಪ್ರದೇಶಗಳಲ್ಲಿನ ಕೃತಕ ಗರ್ಭಧಾರಣಾ ಕೇಂದ್ರಗಳ ಮೂಲಕ ಗ್ರಾಮಾಂತರ ಪ್ರದೇಶದ ರಾಸುಗಳಲ್ಲಿ ಅಮೃತ್ ಮಹಲ್ ತಳಿ ಅಭಿವೃದ್ಧಿಯನ್ನು ಉಂಟುಮಾಡಲಾಗುತ್ತಿದೆ ವಾರ್ಷಿಕ ಸುಮಾರು 1 ಲಕ್ಷ 20 ಸಾವಿರ ಅಮೃತ್ ಮಹಲ್ ರಾಸುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ

ಇ) ಖಿಲ್ಲಾರ್ ತಳಿ ರಾಸುಗಳ ಅಭಿವೃದ್ಧಿಗಾಗಿ ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನ ಬಂಕಾಪುರ ಗ್ರಾಮದಲ್ಲಿ ಖಿಲ್ಲಾರ್ ತಳಿ ರಾಸುಗಳನ್ನು ಸಾಕಿ ಸದರಿ ತಳಿಯ ಸಂರಕ್ಷಣೆ/ಸಂವರ್ಧನೆ ಮತ್ತು ಅಭಿವೃದ್ಧಿಪಡಿಸಲಾಗುತ್ತಿದೆ ಈ ಕ್ಷೇತ್ರದಲ್ಲಿ ಜನಿಸಿದ ಉತ್ತಮ ಗಂಡು ಕರುಗಳನ್ನು ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಸರಬರಾಜು ಮಾಡಿ ಉತ್ಪಾದಿಸಿದ ಘನೀಕೃತ ವೀರ್ಯವನ್ನು ಖಿಲ್ಲಾರ್ ತಳಿ ಪ್ರದೇಶಗಳಲ್ಲಿನ ಕೃತಕ ಗರ್ಭಧಾರಣಾ ಕೇಂದ್ರಗಳ ಮೂಲಕ ಗ್ರಾಮಾಂತರ ಪ್ರದೇಶದ ರಾಸುಗಳಲ್ಲಿ ಖಿಲ್ಲಾರ್ ತಳಿ ಅಭಿವೃದ್ಧಿಯನ್ನು ಉಂಟುಮಾಡಲಾಗುತ್ತದೆ ವಾರ್ಷಿಕ

ಸುಮಾರು 1 ಲಕ್ಷ 40 ಸಾವಿರ ಖಿಲ್ಲಾರ್ ರಾಸುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ

ಈ) ಉತ್ತಮ ಗುಣಮಟ್ಟದ ಧೇವಣಿ ತಳಿ ಹೋರಿ ಕರುಗಳನ್ನು ರೈತರಿಂದ ಆಯ್ಕೆ ಮಾಡಿ ಇವುಗಳನ್ನು ಘನೀಕೃತ ವೀರ್ಯ ಉತ್ಪಾದನೆ ಮಾಡಿ ಧೇವಣಿ ತಳಿ ಪ್ರದೇಶದಲ್ಲಿನ ಕೃತಕ ಗರ್ಭಧಾರಣಾ ಕೇಂದ್ರಗಳ ಮೂಲಕ ಗ್ರಾಮಾಂತರ ಪ್ರದೇಶದ ರಾಸುಗಳಲ್ಲಿ ಧೇವಣಿ ತಳಿ ಅಭಿವೃದ್ಧಿಯನ್ನು ಉಂಟುಮಾಡಲಾಗುತ್ತಿದೆ ವಾರ್ಷಿಕ ಸುಮಾರು ಇಪ್ಪತ್ತು ಸಾವಿರ ಧೇವಣಿ ರಾಸುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ

ಉ) ಕೃಷ್ಣಸ್ಯಾಲಿ ತಳಿ ಅಭಿವೃದ್ಧಿಗಾಗಿ ಮುನಿರಾಬಾದ್ ಕ್ಷೇತ್ರದಲ್ಲಿ ವ್ಯವಸ್ಥೆ ಕಲ್ಪಿಸಲಾಗಿದ್ದು ರೈತರ ಬಳಿ ರಾಸುಗಳನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ

2 ಹೈನು ರಾಸುಗಳ ಅಭಿವೃದ್ಧಿ

ಕೇಂದ್ರ ಸರ್ಕಾರದ ನ್ಯಾಷನಲ್ ಪ್ರಾಜೆಕ್ಟ್ ಫಾರ್ ಕ್ಯಾಟಲ್ ಆಂಡ್ ಬಫೆಲೋ ಬ್ರೀಡಿಂಗ್ ಆಡಿಯಲ್ಲಿ 2003–04 ಸಾಲಿನಿಂದ ಘನೀಕೃತ ವೀರ್ಯ ಕೇಂದ್ರಗಳ ಆಧುನೀಕರಣವನ್ನು ಕೈಗೊಳ್ಳಲಾಗುತ್ತಿದೆ ವೀರ್ಯ ಸಂಸ್ಕರಣೆಗೆ ಪ್ರದೇಶಗಳಲ್ಲಿ ತಯಾರಾದ ಆಧುನಿಕ ಯಂತ್ರೋಪಕರಣಗಳನ್ನು ಖರೀದಿಸಿ ಘನೀಕೃತ ವೀರ್ಯ ಕೇಂದ್ರಗಳಲ್ಲಿ ಅಳವಡಿಸಲಾಗಿದ್ದು ಉತ್ತಮ ಗುಣಮಟ್ಟದ ವೀರ್ಯ ಉತ್ಪಾದನೆಗೆ ಸಹಕಾರಿಯಾಗಿರುತ್ತದೆ 1996–97 ರಲ್ಲಿ 32 ಹೆಚ್ ಎಫ್ ಮತ್ತು 30 ಜರ್ಸಿ ಹೋರಿಗಳನ್ನು ಆಸ್ಟ್ರೇಲಿಯಾ ದೇಶದಿಂದ ಪಡೆದು ಘನೀಕೃತ ವೀರ್ಯ ಉತ್ಪಾದನೆ ಮೂಲಕ ರಾಜ್ಯದ ಹೈನು ರಾಸುಗಳ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಲಾಯಿತು ಸದರಿ ಹೋರಿಗಳನ್ನು 5 ವರ್ಷಗಳ ಅವಧಿಗೆ ಬಳಸಿ ಅವುಗಳನ್ನು ತೆಗೆಯಲಾಗಿದೆ ದೇಶೀಯ ಹಳ್ಳಿಕಾರ್, ಅಮೃತ್ ಮಹಲ್, ಖಿಲ್ಲಾರ್ ಮತ್ತು ಧೇವಣಿ ತಳಿ ಹೋರಿಗಳನ್ನು ಘನೀಕೃತ ವೀರ್ಯ ಕೇಂದ್ರಗಳಲ್ಲಿ ವೀರ್ಯ ಉತ್ಪಾದನೆಗಾಗಿ ಬಳಸಿ ರಾಜ್ಯದಲ್ಲಿನ ದೇಶೀಯ ತಳಿಗಳ ಅಭಿವೃದ್ಧಿಗೆ ಬಳಸಲಾಗಿದೆ ಗರ್ಭಧಾರಣಾ ಪ್ರಮಾಣ ಹಾಗೂ ಆರೋಗ್ಯವಂತ ಕರುಗಳ ಜನನದ ಆಧಾರದ ಮೇಲೆ ಸರಬರಾಜಾಗುತ್ತಿರುವ ಘನೀಕೃತ ವೀರ್ಯದ ಫಲವತ್ತತೆ ಉತ್ತಮವಾಗಿರುವುದು ಘನೀಕೃತ ವೀರ್ಯ ಕೇಂದ್ರಗಳಲ್ಲಿ ಹೆಚ್ಚಿನ ಕಾರ್ಯಕ್ರಮಗಳನ್ನು (ವೀರ್ಯ ಸಂಸ್ಕರಣೆ ಹಾಗೂ ಶೇಖರಣೆ) ಗಣಕೀಕೃತಗೊಳಿಸಿರುವ ರಾಸು ಉತ್ಪಾದನಾ ಗುಣಮಟ್ಟವು ಅಂತರ್‌ರಾಷ್ಟ್ರೀಯ ಗುಣಮಟ್ಟಕ್ಕೆ ಸರಿಸಮಾನವಾಗಿರುತ್ತದೆ

ರಾಜ್ಯದಲ್ಲಿನ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳನ್ನು ISO 200 ದೃಢೀಕರಣದಡಿಯಲ್ಲಿ ತರಲಾಗುತ್ತಿದೆ ಘನೀಕೃತ ವೀರ್ಯ ಉತ್ಪಾದನೆಗೆ ಬಳಸಲಾಗುತ್ತಿರುವ ಹೋರಿ ಮತ್ತು ಕೋಣಗಳನ್ನು ಸರ್ವ ರೀತಿಯ ಪರೀಕ್ಷೆಗೆ ಒಳಪಡಿಸಿ ಯಾವುದೇ ಅನುಮತಿಯ ನ್ಯೂನತೆಗಳಿಂದ ಮುಕ್ತವಾಗಿರುವುದನ್ನು ಹಾಗೂ ಖಾಯಿಲೆಗಳಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಂಡ ನಂತರ ಮಾತ್ರ ಬಳಸಲಾಗುತ್ತಿದೆ ಇಲಾಖೆಯ ವತಿಯಿಂದ ವಾರ್ಷಿಕ ಸುಮಾರು 7 ಲಕ್ಷ ಹಸುಗಳಲ್ಲಿ ಹೆಚ್ ಎಫ್ ಮತ್ತು 8 ಲಕ್ಷ ಹಸುಗಳಲ್ಲಿ ಜರ್ಸಿ ತಳಿ ಘನೀಕೃತ ವೀರ್ಯವನ್ನು ಮಿಶ್ರತಳಿ ಕರುಗಳ ಉತ್ಪಾದನೆಗೆ ಬಳಸಲಾಗುತ್ತಿದೆ

ಕೇಂದ್ರ ಸರ್ಕಾರದ ಆಯಾತ ನಿಯಾತ ನೀತಿಯಡಿಯಲ್ಲಿ ವಿದೇಶದಿಂದ ಹೋರಿಗಳನ್ನು ಆಯಾತ ಮಾಡಿಕೊಳ್ಳುವ ಬಗ್ಗೆ ನಿರ್ಬಂಧವಿರುವುದರಿಂದ ಇಲಾಖೆಗೆ 60 ಹೆಚ್ ಎಫ್ ಮತ್ತು 50 ಜರ್ಸಿ ಹೋರಿಗಳು ಅವಶ್ಯಕತೆಯಿದ್ದರೂ ಸಹ ಆಯಾತ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ ದೇಶದಲ್ಲಿ ಎಲ್ಲಿಯೂ ಅವಶ್ಯಕ ಗುಣಮಟ್ಟದ (ಪೆಡಿಗ್ರಿ) ಹೆಚ್ ಎಫ್ ಮತ್ತು ಜರ್ಸಿ ಹೋರಿಗಳು ಲಭ್ಯವಾಗುತ್ತಿಲ್ಲವಾದ ಕಾರಣ ವಿದೇಶದಿಂದ ಆಯಾತ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಈಗಾಗಲೇ ನಿರ್ಬಂಧ ಸಡಿಲಿಕೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಕೇಂದ್ರ ಸರ್ಕಾರವು ವಿದೇಶದಿಂದ ಇಲಾಖೆಗೆ ಹಾಗೂ ಕರ್ನಾಟಕ ಹಾಲು ಮಹಾ ಮಂಡಳಕ್ಕೆ ತಲಾ 30 ಹೋರಿಗಳನ್ನು ಆಯಾತ ಮಾಡಿಕೊಳ್ಳಲು ಅನುಮತಿ ನೀಡಿರುತ್ತದೆ ಹೋರಿಗಳ ಖರೀದಿಗಾಗಿ 2006–07 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಸುಮಾರು 6 75 ಕೋಟಿ ರೂ ಗಳ ಅನುದಾನವನ್ನು ಕೋರಲಾಗುತ್ತಿದೆ

3. ಬೆಲೆಬಾಳುವ ಜಾನುವಾರುಗಳ ವಿಮೆ

ರಾಜ್ಯದ ಕೋಲಾರ, ಬೆಂಗಳೂರು (ನಗರ), ಬೆಂಗಳೂರು (ಗ್ರಾ) ಮತ್ತು ಮಂಡ್ಯ ಜಿಲ್ಲೆಗಳಲ್ಲಿನ ರೈತನ ಬಳಿಯಿರುವ ಯಾವುದೇ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳ ಅಡಿಯಲ್ಲಿ ಬಾರದೆಯಿರುವ ಬೆಲೆ ಬಾಳುವ ಹಸು ಮತ್ತು ಎಮ್ಮೆಗಳನ್ನು ಮುಂದಿನ ಮೂರು ವರ್ಷಗಳವರೆಗೆ ವಿಮೆಗೆ ಒಳಪಡಿಸುವ ಕೇಂದ್ರ ಸರ್ಕಾರದ ಯೋಜನೆಯನ್ನು ಪ್ರಾಯೋಗಿಕವಾಗಿ ಕೈಗೊಳ್ಳಲಾಗಿದೆ

ವರಾಹ ಅಭಿವೃದ್ಧಿ

ರಾಜ್ಯದಲ್ಲಿ ಒಟ್ಟು 3 ಹಂದಿ ಸಂವರ್ಧನಾ ಕ್ಷೇತ್ರಗಳಿದ್ದು, ಅವುಗಳು ಬೆಂಗಳೂರು ಜಿಲ್ಲೆಯ ಹೆಸರುಘಟ್ಟ, ಕೊಡಗು ಜಿಲ್ಲೆಯ ಕೊಡಿಗೆ ಮತ್ತು ದಕ್ಷಿಣ

ಕನ್ನಡ ಜಿಲ್ಲೆಯ ಕೊಯ್ನಾಗಳಲ್ಲಿವೆ ಈ ಕೇಂದ್ರಗಳಲ್ಲಿ ಅನುಕ್ರಮವಾಗಿ 62,69,56 ಹಂದಿಗಳ ಇರುವುದು ಈ ಕೇಂದ್ರಗಳ ಉದ್ದೇಶಗಳು ಕೆಳಕಂಡಂತಿದೆ

1 ಸುಧಾರಿತ ವಿದೇಶಿ ತಳಿಗಳ ಹಂದಿಗಳನ್ನು ಸಂವರ್ಧಿಸಿ ಮರಿಗಳನ್ನು ಉತ್ಪಾದಿಸಿ ರೈತರಿಗೆ ಮತ್ತು ವಿವಿಧ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ಫಲಾನುಭವಿಗಳಿಗೆ ಸಾಕಾಣಿಕೆಗಾಗಿ ವಿತರಣೆ ಮಾಡುವುದು

2 ರೈತರಿಗೆ ಹಾಗೂ ವಿವಿಧ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳಿಗೆ, ಫಲಾನುಭವಿಗಳಿಗೆ, ಆಧುನಿಕ ಮತ್ತು ವೈಜ್ಞಾನಿಕ ಹಂದಿಸಾಕಾಣಿಕೆಯಲ್ಲಿ ತರಬೇತಿ ನೀಡುವುದು

3 ಆಧುನಿಕ ಹಂದಿ ಸಾಕಾಣಿಕೆಯಲ್ಲಿ ತೊಡಗಬೇಕೆಂದಿರುವ ರೈತರಿಗೆ ಸಾಲ ಪಡೆಯಲು ನೆರವು ನೀಡುವುದು ಮತ್ತು ಅಂತಹ ಯೋಜನೆಗಳ ವರದಿಗಳನ್ನು ತಯಾರಿಸುವುದು

4 ಹಂದಿ ಸಂವರ್ಧನಾ ಕ್ಷೇತ್ರಗಳ ಸುತ್ತಮುತ್ತಲ್ಲಿರುವ ರೈತರಿಗೆ ವಿಸ್ತರಣಾ ಕಾರ್ಯಗಳ ಸೌಲಭ್ಯಗಳನ್ನು ಒದಗಿಸುವುದು

5 ಹಂದಿ ಮಾಂಸದ ಪೌಷ್ಟಿಕತೆಯನ್ನು ಜನರಿಗೆ ತಿಳಿಯಪಡಿಸುವುದು ಮತ್ತು ಉತ್ತಮ ಗುಣಮಟ್ಟದ ಹಂದಿ ಮಾಂಸದ ಮಾರಾಟಕ್ಕೆ ವ್ಯವಸ್ಥೆ ಮಾಡುವುದು

6 ಹಂದಿ ಸಾಕಾಣಿಕೆದಾರರಿಗೆ ಸೂಕ್ತ ಮಾರುಕಟ್ಟೆ ದೊರಕಿಸಲು ಸಹಾಯಕ ಮಾಡುವುದು

ಕುರಿ ಅಭಿವೃದ್ಧಿ

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಕುರಿ ಸಾಕಾಣೆದಾರರಿಗೆ

1 ಉತ್ತಮ ಜಾತಿಯ ಮಿಶ್ರತಳಿ ಟಗರುಗಳ ಸರಬರಾಜು ಮಾಡಲಾಗುತ್ತಿದೆ

2 ರಾಜ್ಯದಲ್ಲಿನ ಕುರಿಗಳಿಗೆ ವರ್ಷಕ್ಕೆ 2 ಬಾರಿ ಜಂತುನಾಶಕ ಔಷಧ ವಿತರಿಸಲಾಗುತ್ತಿದೆ

3 ಅಂಚನ ಹಣ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಕುರಿಗಾರರಿಗೆ ಕುರಿ ಸಾಕಾಣಿಕೆಗೆ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ

4 ಕುರಿ ಸಾಕಾಣಿಕೆದಾರರಿಗೆ ವೈಜ್ಞಾನಿಕ ಕುರಿ ಸಾಕಣಿಕೆ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

5 ಕುರಿ ಸಾಕಾಣಿಕೆದಾರರಿಗೆ ಶ್ರೇಯೋಭಿವೃದ್ಧಿಗೆ ಕುರಿ ಸಾಕಾಣಿಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಿ ಮತ್ತು ನಿಧಿ ನೀಡಲಾಗುತ್ತಿದೆ

6 ರಾಜ್ಯದಲ್ಲಿನ ಕುರಿಗಳಿಗೆ ಜನಶ್ರೀ ವಿಮಾ ಯೋಜನೆಯಡಿ ಕುರಿಗಳಿಗೆ ವಿಮಾ ರಕ್ಷಣೆ ಒದಗಿಸಲಾಗುತ್ತಿದೆ

ಕುರಿ ಸಾಕಾಣಿಕೆದಾರರ ವಿಮಾ ರಕ್ಷಣೆ ರೂ 30 00 ಲಕ್ಷ ನಿಗಧಿಯಾಗಿದ್ದು ಕೇಂದ್ರ ಸರ್ಕಾರದ ಪಾಲು ಬಿಡುಗಡೆಯಾದ ನಂತರ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು

ಕುಕ್ಕುಟ ಅಭಿವೃದ್ಧಿ –

1 ಇಲಾಖೆಯ ವತಿಯಿಂದ ರಾಜ್ಯದ 24 ಕೋಳಿ ಕ್ಷೇತ್ರಗಳಿಂದ ಗಿರಿರಾಜ ಕೋಳಿ ಮರಿಗಳನ್ನು ಉತ್ಪಾದಿಸಿ 8 ವಾರದವರೆಗೆ ಸಾಕಿ ಲಾಭ ನಷ್ಟವಿಲ್ಲದ ಬೆಲೆಯಲ್ಲಿ ಸರ್ಕಾರದ ಆರ್ಥಿಕ ಮತ್ತು ಸಾಮಾಜಿಕ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗುತ್ತಿದೆ

2 ಆಸಕ್ತಿ ರೈತರಿಗೆ ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಮೊಟ್ಟೆ ಕೋಳಿ ಸಾಕಾಣಿಕೆ ಮತ್ತು ಮಾಂಸ ಕೋಳಿ ಸಾಕಾಣಿಕೆ ಬಗ್ಗೆ ತರಬೇತಿ ನೀಡಲಾಗುತ್ತಿದೆ

3 ಕೋಳಿ ರೋಗ ನಿರ್ಣಯ ಪ್ರಯೋಗಾಲಯ ಸೌಲಭ್ಯ ರೋಗ ನಿರೋಧಕ ಚುಚ್ಚು ಮದ್ದು ಹಂಚಿಕೆ ಮತ್ತು ರೋಗ ಹತೋಟಿ ಕಾರ್ಯಕ್ರಮದ ಅನುಷ್ಠಾನ

4 ಕೋಳಿ ಸಾಕಾಣಿಕ ಬಗ್ಗೆ ಯೋಜನಾ ವರದಿ ತಯಾರಿಕೆ

5 ಕುಕ್ಕುಟ ಆಹಾರ ಗುಣ ನಿಯಂತ್ರಣ

6 ಕೇಂದ್ರೀಯ ಪುರಸ್ಕೃತ ಯೋಜನೆ ನೆರವು ಅಡಿಯಲ್ಲಿ ಪ್ರಾದೇಶಿಕ

ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಮಳವಳ್ಳಿಯಲ್ಲಿ ಕಾರ್ಯಕ್ರಮ ಅನುಷ್ಠಾನಗೊಂಡಿದ್ದು, ಪ್ರಸ್ತುತ ಸಾಲಿನಲ್ಲಿ ಹೆಸರಘಟ್ಟ ಮತ್ತು ಗಂಗಾವತಿಯಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕೆ ಕಾರ್ಯಕ್ರಮ ರೂಪಿಸಲಾಗಿದೆ

ಅನುಬಂಧ–2

ಜಿಲ್ಲಾವಾರು ಪ್ರಗತಿ ವಿವರ

ಆರ್ಥಿಕ

ಕ್ರಮ ಸಂಖ್ಯೆ	ಜಿಲ್ಲೆ	ವಾರ್ಷಿಕ ನಿಗಧಿ	ಸಂಚಿತ ಗುರಿ	ಸಂಚಿತ ಪ್ರಗತಿ	%	ಬಿಡುಗಡೆ
1	ಬಾಗಲಕೋಟೆ	123 76	102 80	103 32	100 51	82 35
2	ಬೆಂಗಳೂರು ಗ್ರಾ	134 69	74 32	83 32	114 80	72 8
3	ಬೆಂಗಳೂರು ನಗರ	137 66	121 25	69 15	57 03	92 16
4	ಬೆಳಗಾಂ	166 23	136 28	138 44	101 58	108 75
5	ಬಳ್ಳಾರಿ	115 55	89 95	65 20	72 48	75 5
6	ಬೀದರ್	83 90	50 40	33 87	67 20	33 87
7	ಬಿಜಾಪುರ	114 71	92 72	72 40	78 08	72 40
8	ಚಾಮರಾಜನಗರ	74 22	60 00	47 26	78 77	47 26
9	ಚಿಕ್ಕಮಗಳೂರು	104 00	80 06	54 99	68 69	54 99
10	ಚಿತ್ರದುರ್ಗ	59 98	37 39	24 15	64 59	24 15
11	ದಾವಣಗೆರೆ	119 57	92 15	42 42	46 08	62 28
12	ದಕ್ಷಿಣ ಕನ್ನಡ	83 64	69 98	61 98	88 57	58 23
13	ಧಾರವಾಡ	106 94	80 79	57 52	71 20	63 54
14	ಗದಗ	49 46	42 52	40 61	95 51	32 7
15	ಗುಲ್ಬರ್ಗಾ	198 47	180 00	104 93	69 95	101 89
16	ಹಾಸನ	124 72	105 12	72 18	68 66	88 82

17	ಹಾವೇರಿ	51 28	33 31	31 94	95 89	31 90
18	ಕೊಡಗು	43 80	23 23	18 97	81 59	22 89
19	ಕೋಲಾರ	164 10	146 08	100 65	68 02	95 00
20	ಕೊಪ್ಪಳ	75 72	61 28	17 95	78 25	17 07
21	ಮಂಡ್ಯ	128 75	93 85	74 76	79 66	74 76
22	ಮೈಸೂರು	166 83	127 50	95 34	74 78	94 13
23	ರಾಯಚೂರು	150 22	111 57	67 08	60 12	70 36
24	ಶಿವಮೊಗ್ಗ	149 88	122 50	69 57	56 79	91 23
25	ತುಮಕೂರು	162 10	128 47	93 20	72 55	85 00
26	ಉಡುಪಿ	60 70	50 50	51 27	101 52	50 50
27	ಉತ್ತರ ಕನ್ನಡ	50 16	36 24	37 07	102 29	36 49
	ಒಟ್ಟು	**3009 32**	**2320 24**	**1761 54**	**75 92**	**1771 04**

578 (1077) ಶ್ರೀಮತಿ ಭಾಗೀರಥಿ ಟ (ಕೊಟ್ಟೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2006–07ನೇ ಸಾಲಿನಲ್ಲಿ ಮಂಜೂರಾದ ಮೊರಾರ್ಜಿ ವಸತಿ ಶಾಲೆಗಳ ಸಂಖ್ಯೆ ಎಷ್ಟು?

ಆ) ಬಳ್ಳಾರಿ ಜಿಲ್ಲೆಗೆ ಎಷ್ಟು ಮೊರಾರ್ಜಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ ಆ ಪೈಕಿ ಎಷ್ಟು ಕಾರ್ಯಗತಗೊಂಡಿರುತ್ತವೆ?

ಇ) ಈ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರ ಸಂಖ್ಯೆ ಎಷ್ಟು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ 2006–07 ಸಾಲಿನಲ್ಲಿ ಒಟ್ಟು 77 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ

ಆ) ಬಳ್ಳಾರಿ ಜಿಲ್ಲೆಗೆ 5 ಪರಿಶಿಷ್ಟ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ ಈ ಪೈಕಿ 3 ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ